ಶ್ರೀ ಎನ್. ಯೋಗೀಶ್ ಭಟ್ :- ಮಾನ್ಯ ಉಪಾಧ್ಯಕ್ಷರೇ, ಆದರಲ್ಲಿ ಸ್ಪಷ್ಟೀಕರಣ ಕೊಡಬೇಕು. ಇದರಲ್ಲಿ ತಾವು ಏನು ಪರಿಹಾರ ಕೊಡುತ್ತೀರಿ? ಉಪಾಧ್ಯಕ್ಷರೇ, ನನಗೆ ಮಾತನಾಡಲು ಒಂದ ಅವಕಾಶ ಕೊಡಿ.

ಉಪಾಧ್ಯಕ್ಷರು :- ನಾನು ನಿಮಗೆ ಅವಕಾಶ ಕೊಟ್ಟಿಲ್ಲ, ತಾವು ಕುಳಿತುಕೊಳ್ಳಿ.

ವಿಷಯ :- 'ಡಿ'ವರ್ಗದ ನೌಕರರಿಗೆ ರಿಯಾಯತಿ ದರದಲ್ಲಿ ನಿವೇಶನಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 240 (317)

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ಡಿ ವರ್ಗದ ನೌಕರರಿಗೆ 50,000 ನಿವೇಶನಗಳನ್ನು ರಿಯಾಯಿತಿ ದರದಲ್ಲಿ ನೀಡಲು ನಿರ್ಧಾರ ತೆಗೆದುಕೊಂಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಯೋಜನೆಗೆ ನಿಗಧಿ ಪಡಿಸಿದ ಮೊತ್ತವೆಷ್ಟು?

ಇ) 31-3-96 ರೊಳಗೆ ಎಷ್ಟು ನಿವೇಶನಗಳನ್ನು ಹಂಚಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :-

ಅ) ಹೌದು. ರಾಜ್ಯ ಸರ್ಕಾರದಲ್ಲಿ ಡಿ ದರ್ಜೆಯ ವಸತಿ : ನಿವೇಶನ ರಹಿತ ನೌಕರರಿಗೆ ಶೇಕಡ 50 ರ ರಿಯಾಯಿತಿ ಬೆಲೆಯಲ್ಲಿ ನಿವೇಶನಗಳನ್ನು ಒದಗಿಸಲು ಸರ್ಕಾರ ನಿರ್ಧರಿಸಿದೆ.

ಆ) ಇಲ್ಲ ನಿಗಧಿಪಡಿಸಿರುವುದಿಲ್ಲ.

ಇ) ಇನ್ನೂ ಹಂಚಿರುವುದಿಲ್ಲ.

ಶ್ರೀ ಯು. ಬಿ. ಬಣಕಾರ್ :- ಮಾನ್ಯ ಉಪಾಧ್ಯಕ್ಷರೇ, ಹಿಂದಿನ ಮುಖ್ಯ ಮಂತ್ರಿಗಳು ದಿನಾಂಕ 2-10-95 ರಂದು ಈ ರಾಜ್ಯದ ಪ್ರತಿಯೊಂದು ದಿನಪತ್ರಿಕೆಯಲ್ಲಿ ದೊಡ್ಡ ಜಾಹಿರಾತು ಕೊಟ್ಟರು. 483 ಕೋಟಿ ರೂಪಾಯಿಗಳ ಒಂದು ಐತಿಹಾಸಿಕ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ, ಆದರಲ್ಲಿ ರಾಜ್ಯ ಸರ್ಕಾರ ಗ್ರೂಪ್ (ಡಿ) ವರ್ಗದ ನೌಕರರಿಗೆ 30 x 40 ಅಡಿ ಅಳತೆಯ 50 ಸಾವಿರ ನಿವೇಶನಗಳನ್ನು ರಿಯಾಯಿತಿ ದರದಲ್ಲಿ ನೀಡುತ್ತೇವೆ. ಎಂದು ಘೋಷಣೆ ಮಾಡಿದರು. ಆದರೆ ಇವತ್ತಿನವರೆಗೂ ಒಂದೂ ನಿವೇಶನವನ್ನು ಹಂಚಲಾಗಿಲ್ಲ. ಕಾರಣ ಏನು? ಆಥವಾ ಹಣ ಇಲ್ಲದೇ ಈ ರೀತಿಯ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆಯೇ?

11-10 ಎ. ಎಂ.

ಶ್ರೀ ಹೆಚ್. ಡಿ. ರೇವಣ್ಣ :- ಮಾನ್ಯ ಸಭಾಧ್ಯಕ್ಷರೇ, (ಡಿ) ಗ್ರೂಪ್ ನೌಕರರಿಗೆ ನಿವೇಶನ ಹಂಚುವ ಕಾರ್ಯಕ್ರಮ ಇದೆ. ಆದರೆ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಸಮಿತಿಯನ್ನು ಮಾಡಲಾಗಿದೆ ಅವರು ಸಮಿತಿಯಲ್ಲಿ ಆಯ್ಕೆ ಮಾಡಿ, ಯಾರ್ಯಾರು ನೌಕರರಿಗೆ ನಿಜವಾಗಿ ಸೈಟಿಲ್ಲ ಅಂತಹವರ ಪಟ್ಟಿ ಬಂದ ತಕ್ಷಣ ಅದನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಶ್ರೀ ಯು. ಬಿ. ಬಣಕಾರ್ :- ಮಾನ್ಯ ಉಪಾಧ್ಯಕ್ಷರೇ, ಎಷ್ಟು ದಿವಸಗಳಲ್ಲಿ ಈ ಕಾರ್ಯಕ್ರಮವನ್ನು ಪೂರ್ತಿಮಾಡುತ್ತಾರೆ?

ಶ್ರೀ ಹೆಚ್. ಡಿ. ರೇವಣ್ಣ :- 2 ರಿಂದ 3 ತಿಂಗಳು ಬೇಕಾಗುತ್ತದೆ.

ವಿಷಯ :- ಗ್ರಾಮ ಸಹಾಯಕರನ್ನು ಖಾಯಂ ಗೊಳಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 226 (1703)

ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು) :- ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 48 ವರ್ಷಗಳಿಂದ 10,000 ಗ್ರಾಮಸಹಾಯಕರು ನಿಗದಿತ ಸಮಯಕ್ಕೆ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇವರ ನೇಮಕಾತಿಯನ್ನು ಖಾಯಂ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಮೇಶ್ ಎಸ್. ಜಿಗಜಿಣಗಿ :- ಮಾನ್ಯ ಉಪಾಧ್ಯಕ್ಷರೇ, (ಕಂದಾಯ ಮಂತ್ರಿಗಳು :-

ಅ) ಹೌದು.

ಆ) ಅಧ್ಯಕ್ಷರು, ಕರ್ನಾಟಕ ರಾಜ್ಯ ಕಂದಾಯ ಇಲಾಖೆ, ಗ್ರಾಮ ಸಹಾಯ ಕರುಗಳ ಸಂಘ (ರಿ) ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲ ಗ್ರಾಮ ಸಹಾಯ ಕರುಗಳನ್ನು ಖಾಯಂಗೊಳಿಸುವ ಬಗ್ಗೆ ರಿಟ್ ಅರ್ಜಿ ಸಂಖ್ಯೆ : 29424 : 94 ರನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯು ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವುದರಿಂದ, ಈ ಹಂತದಲ್ಲಿ ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ :- ಮಾನ್ಯ ಉಪಾಧ್ಯಕ್ಷರೇ, ಬಹುಶಃ ಈ ಕಂದಾಯ ನೌಕರರು ತುಂಬಾ ನತದೃಷ್ಟರು ಎಂದು ನಾನು ಭಾವಿಸಿದ್ದೇನೆ.